# ರಕ್ಷಿತ್ ಕಮ್‌ಬ್ಯಾಕ್!

ಶ್ರೀಮನ್ನಾರಾಯಣ ಸೋಷಿಯಲ್ ಮೀಡಿಯಾಗೆ ಮರಳಿದ್ದಾನೆ! ದೇವ್ರೂ ಟ್ವಿಟರ್ ಅಕೌಂಟ್ ಓಪನ್ ಮಾಡೋ ಕಾಲ ಬಂತಾ ಅಂತ ಹುಬ್ಬೇರಿಸಬೇಡಿ. ಇವನು 'ಅವನೇ ಶ್ರೀಮನ್ನಾರಾಯಣ' ಅಲಿಯಾಸ್ ರಕ್ಷಿತ್ ಶೆಟ್ಟಿ!

ವರ್ಷದ ಹಿಂದೆ ರಕ್ಷಿತ್ ಸೋಷಿಯಲ್ ಮೀಡಿಯಾ ತೊರೆದಿದ್ದರು. ಫೇಸ್‌ಬುಕ್, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್ ಮೂರೂ ವೇದಿಕೆಗಳಲ್ಲಿನ ಖಾತೆಯನ್ನು ಡಿಲೀಟ್ ಮಾಡಿದ್ದರು. ಹಾಗಾಗಿ ಕಳೆದ ಒಂದು ವರ್ಷದಿಂದ ರಕ್ಷಿತ್ ಯಾವ ಸೋಷಿಯಲ್ ಮೀಡಿಯಾ ವೇದಿಕೆಯಲ್ಲಿಯೂ ನೇರವಾಗಿ ಕಾಣಿಸಿಕೊಂಡಿರಲಿಲ್ಲ. ಇದರಿಂದ ಅವರ ಅಭಿಮಾನಿಗಳಿಗೆ ನಿರಾಸೆಯಾಗಿದ್ದಂತೂ ನಿಜ. ಈ ನಡುವೆ ಅವರು 'ಅವನೇ ಶ್ರೀಮನ್ನಾರಾಯಣ' ಸಿನಿಮಾದಲ್ಲಿ ಬ್ಯುಸಿಯಾಗಿದ್ದರು. ಈಗ ಸ್ನೇಹಿತರು, ಅಭಿಮಾನಿಗಳ ಒತ್ತಾಯದ ಮೇರೆಗೆ ಸೋಷಿಯಲ್ ಮೀಡಿಯಾಗೆ ಮರಳಿದ್ದಾರೆ. ಜೂನ್ 5ರಂದು ಅವರು ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮತ್ತು ಟ್ವಿಟರ್ ಮೂರೂ ಜಾಲತಾಣಗಳಲ್ಲಿ ತಮ್ಮ ಖಾತೆಯನ್ನು ತೆರೆದಿದ್ದಾರೆ. 'ಶ್ರೀಮನ್ನಾರಾಯಣ'ನ ಪ್ರಚಾರಕಾರ್ಯಗಳಿಗೂ ಸಹಾಯವಾಗಲಿ ಎಂಬ ಉದ್ದೇಶವೂ ರಕ್ಷಿತ್ ಕಮ್‌ಬ್ಯಾಕ್ ಹಿಂದೆ ಇದೆ ಎನ್ನಲಾಗುತ್ತಿದೆ.

ಅವನೇ ಶ್ರೀಮನ್ನಾರಾಯಣ ಚಿತ್ರವನ್ನು ಸಚಿನ್ ರವಿ ನಿರ್ದೇಶಿಸುತ್ತಿದ್ದು, ಪುಷ್ಕರ್ ಮಲ್ಲಿಕಾರ್ಜುನಯ್ಯ ನಿರ್ಮಾಣ ಮಾಡುತ್ತಿದ್ದಾರೆ. ಐದು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಜೂನ್ 6ರಂದು ರಕ್ಷಿತ್ ಜನ್ಮದಿನದ ಪ್ರಯುಕ್ತ ಈ ಚಿತ್ರದ ಟ್ರೇಲರ್ ಅನ್ನು ಬಿಡುಗಡೆ ಮಾಡಲಾಗಿದೆ. ಈ ಟ್ರೇಲರ್ ಅನ್ನು ಪ್ರಕಟಿಸುವ ಮೂಲಕವೇ ರಕ್ಷಿತ್ ಸೋಷಿಯಲ್ ಮೀಡಿಯಾದಲ್ಲಿ ಮತ್ತೆ ಆ್ಯಕ್ಟಿವ್ ಆಗಿದ್ದಾರೆ. ಇನ್ನು ಮುಂದೆ ನಿರಂತರವಾಗಿ ಅವರ ಸಿನಿಮಾಗಳ ಸುದ್ದಿಗಳನ್ನು ಸೋಷಿಯಲ್ ಮೀಡಿಯಾದ ಅವರ ಖಾತೆಯ ಮೂಲಕವೇ ಅಪ್‌ಡೇಟ್ ಮಾಡಲಾಗುತ್ತದಂತೆ. ■





# ಮಿಲನಾ ಉದ್ಭವ!

ಕೂಡ್ಲು ರಾಮಕೃಷ್ಣ 'ಮತ್ತೆ ಉದ್ಭವ'ವಾಗಿದ್ದಾರೆ! 1990ರಲ್ಲಿ ಕೂಡ್ಲು ಇದೇ ಹೆಸರಿನ ಚಿತ್ರ ನಿರ್ದೇಶಿಸಿದ್ದರು. ಇದೀಗ ಅದೇ ಹಾಸ್ಯದ ಎಳೆಯನ್ನು ಇಟ್ಟುಕೊಂಡು ಇಂದಿನ ಪೀಳಿಗೆಗೆ ಇಷ್ಟವಾಗುವ ಹಾಗೆ ಒಂದಿಷ್ಟು ಸಿಹಿ–ಖಾರ ಮಸಾಲೆಯನ್ನು ಬೆರೆಸಿ 'ಮತ್ತೆ ಉದ್ಭವ' ಎಂಬ ಸಿನಿಮಾ ನಿರ್ದೇಶಿಸುತ್ತಿದ್ದಾರೆ.

ಈ ಚಿತ್ರಕ್ಕೆ ಮಿಲನಾ ನಾಗರಾಜ್ ನಾಯಕಿ. 'ಒಂದಕ್ಕಿಂತ ಇನ್ನೊಂದು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ನನ್ನ ಆಸೆ. ಆ ಆಸೆಗೆ ಪೂರಕವಾಗಿಯೇ ಈ ಚಿತ್ರದ ಪಾತ್ರ ಇತ್ತು. ಇದರಲ್ಲಿ ನನ್ನ ಪಾತ್ರಕ್ಕೆ ಎರಡು ಛಾಯೆಗಳಿವೆ. ಅವುಗಳಲ್ಲಿ ಒಂದು ರಾಜಕಾರಣಿ ಪಾತ್ರ' ಎಂದು ವಿವರಿಸುತ್ತಾರೆ.

ಹಳೆಯ ಸಿನಿಮಾವನ್ನು ಅದೇ ಎಳೆಯೊಂದಿಗೆ ಮತ್ತೆ ನಿರ್ಮಿಸಿದರೆ ಈಗ ಮೆಚ್ಚಿಕೊಳ್ಳುತ್ತಾರೆಯೇ? ಎಂದು ಕೇಳಿದರೆ 'ಹಿಂದೆ 'ಉದ್ಭವ' ಸಿನಿಮಾ ನಿರ್ದೇಶನ ಮಾಡಿರುವುದೂ ಕೂಡ್ಲು ಅವರೇ. ಈಗಲೂ ಅವರೇ ನಿರ್ದೇಶಿಸುತ್ತಿದ್ದಾರೆ. ಹಾಗೆಂದ ಮೇಲೆ ಅವರು ಖಂಡಿತ ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಂಡಿರುತ್ತಾರಲ್ಲವೇ? ಅಲ್ಲದೆ ಸಿನಿಮಾ ನಿರ್ದೇಶಕರ ಕಲ್ಪನೆಯ ಕೂಸು. ಅವರಿಗೆ ನಂಬಿಕೆ ಇದೆ ಎಂದಮೇಲೆ ಮುಗಿಯಿತು. ನಾವು ಅವರ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇವೆ' ಎಂದು ನಗುತ್ತಾರೆ. 'ಇದು ಹಾಸ್ಯಚಿತ್ರ. ಆದರೆ ಹಾಸ್ಯದ ಜೊತೆಗೆ ಸಮಾಜಕ್ಕೆ ಏನಾದರೂ ಸಂದೇಶ ಕೊಡಬೇಕು ಎಂಬ ಅರಿವೂ ನಿರ್ದೇಶಕರಿಗಿದೆ' ಎಂದೂ ಅವರು ಸೇರಿಸುತ್ತಾರೆ.

'ಪ್ರೀಮಿಯರ್ ಪದ್ಮಿನಿ' ಸಿನಿಮಾದಲ್ಲಿ ನಟಿಸಿದ್ದ ಪ್ರಮೋದ್ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದಾರೆ. 'ಉದ್ಭವ'ದಲ್ಲಿ ಅನಂತ್‌ನಾಗ್ ನಿರ್ವಹಿಸಿದ್ದ ಪಾತ್ರವನ್ನು ಈಗ ರಂಗಾಯಣ ರಘು ನಿರ್ವಹಿಸುತ್ತಿದ್ದಾರೆ. ಅಪೇಕ್ಷಾ ಪುರೋಹಿತ್ ಕೂಡ ಒಂದು ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಜೂ. 6ಕ್ಕೆ ಮುಹೂರ್ತ ನೆರವೇರಿಸಿ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದು ಜುಲೈ ಅಂತ್ಯದೊಳಗೆ ಚಿತ್ರೀಕರಣ ಮುಗಿಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ■